ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಬೆಲೆ ನಿಗದಿ ಮಾಡಲಾಗಿದೆ. ಸಣ್ಣ ಆನೆಗಳಿಗೆ ಐವತ್ತು ಸಾವಿರ ರೂಪಾಯಿಗಳಾದರೆ ದೊಡ್ಡ ಆನೆಗಳಿಗೆ 1 ಲಕ್ಷ, 2 ಲಕ್ಷ, 7 ಲಕ್ಷ ರೂಪಾಯಿಗಳವರೆವಿಗೂ ನಿಗದಿಪಡಿಸಲಾಗಿದೆ. ಬೆಲೆ, ಆನೆಗಳ ವಯಸ್ಸಿನ ಮೇಲೆ ನಿಗದಿಯಾಗುತ್ತದೆ.

ಡಾ|| ಎಂ. ಪಿ. ಕರ್ಕಿ : ಸರಿಯಾದ, ಪಳಗಿದ ಆನೆಯಾದರೂ ಕೂಡ ಕೆಲವೊಮ್ಮೆ ವಿಚಿತ್ರವಾಗಿ ವರ್ತಿಸುತ್ತದೆ. ಅದಕ್ಕೆ running amock ಎಂದು ಹೇಳುತ್ತೇವೆ. ಅದೇ ರೀತಿ ಸೈನಿಕರು ಕೂಡ ಕೆಲವು ಸಾರಿ ತಮ್ಮ ನಾಯಕನಿಗೆ ಮೂಗು ಗಂಟು ಹಾಕುತ್ತಾರೆ. ಅದೇಕೆ ಹಾಕುತ್ತಾರೆಂದು ಗೊತ್ತಾಗುವುದಿಲ್ಲ.

MR. SPEAKER : Is it only animals that run amock. Is it only elephants that run amock annd causes panic.

DR. M.P. KARKI : Even individuals also do that.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಸದಸ್ಯರು ಮಾತನಾಡುತ್ತಾ ಆನೆಗಳು ಇದ್ದಕ್ಕಿದ್ದಂತೆ ವಿಚಿತ್ರವಾಗಿ ವರ್ತಿಸುತ್ತವೆಂದು ಹೇಳಿದರು. ಅವು ಏಕೆ ಆ ರೀತಿ ವರ್ತಿಸುತ್ತವೆಂದರೆ ಸುಮ್ಮನಿದ್ದರೆ ಏನೂ ಮಾಡುವುದಿಲ್ಲ. ಯಾರಾದರೂ ಏನಾದರೂ ಅದಕ್ಕೆ ಕೀಟಲೆ ಮಾಡಿದಾಗ, ಅಥವಾ ನೋವಾಗುವಂತೆ ಚುಚ್ಚಿದಾಗ ಮಾತ್ರ ಆ ರೀತಿ ವರ್ತಿಸುತ್ತವೆ.

ಶ್ರೀ ರಾಮಲಿಂಗಾರೆಡ್ಡಿ : ಜಯನಗರದಲ್ಲಿ ನಡೆದದ್ದು ಅದೇ ರೀತಿ. ಆನೆಯನ್ನು ರಸ್ತೆಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದಾಗ ಸ್ಕೂಟರ್ ನಲ್ಲಿ ಹೋಗುತ್ತಿದ್ದವರು ಅದರ ಬಾಲ ಹಿಡಿದು ಎಳೆದಾಗ ಅದಕ್ಕೆ ಕೋಪ ಬಂದು ಅದು ಗಲಾಟೆ ಮಾಡಿದಾಗ ಅದರ ತುಳಿತಕ್ಕೆ ಒಬ್ಬರು ಸತ್ತು ಹೋದರು. ಪೋಲೀಸ್ ಠಾಣೆ ಹತ್ತಿರ ಜನ ಸೇರಿದಾಗಲೂ ಪುನಃ ಅಲ್ಲಿಯೂ ಗಲಾಟೆ ಮಾಡಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹುದ್ದೆಗಳ ಕೊರತೆ

543 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕುಂದಾಪುರ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಯಾವುವು?

2. ಅವುಗಳಿಗೆ ಮಂಜೂರಾದ ಹುದ್ದೆಗಳು ಯಾವುವು? ಕೊರತೆಯಿರುವ ಹುದ್ದೆಗಳಾವುವು?

3. ಈ ಕೊರತೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) 18 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುತ್ತವೆ. (ವಿವರ ಲಗತ್ತಿಸಿರುವ ಪಟ್ಟಿಯಲ್ಲಿದೆ).

2) ವಿವಿಧ ದರ್ಜೆಯ 337 ಹುದ್ದೆಗಳು ಮಂಜೂರಾಗಿದ್ದು, 129 ಹುದ್ದೆಗಳು ಖಾಲಿ ಇರುತ್ತವೆ. (ವಿವರದ ಪಟ್ಟಿಯನ್ನು ಲಗತ್ತಿಸಲಾಗಿದೆ)

3) ಶೀಘ್ರದಲ್ಲಿಯೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ANNEXURE - 1

Sl. No.	Name of the PHC	Medical Officer			Staff Nurse			B.H.E.			Sr. H. I. (M)			L.H.V.			Jr. HA (F)			Jr. HA (M)			Jr. Lab Tec.			FDA			SDA			Clerk cum Typist			Pharmacist			Group - D			Driver			Opthalmic Asst.		
		S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V
1	2	3			4			5			6			7			8			9			10			11			12			13			14			15			16			17		
1.	Siddapura	3	3	-	—			—			1	1	-	1	1	-	9	5	4	4	-		1	-	1	1	-	1	1	-	—			1	-	1	3	1	2	1	1	-	1	-	1
2.	Bidakalakatte	2	2	-	—			1	-	1	1	1	-	1	1	-	8	7	1	4	1	3	1	-	1	1	-	1	1	-	—			1	1	-	3	3	-	—			1	1	-
3.	Kollur	1	1	-	1	1	-	1	-	1	1	1	-	1	1	-	6	5	1	2	2	-	1	-	1	1	1	-	—			—			1	-	1	3	2	1	1	1	-	1	-	1
4.	Byndoor	2	1	1	1	1	-	1	1	-	1	1	-	1	1	-	7	7	-	3	2	1	1	1	-	—			1	1	-	—			1	1	-	5	3	2	1	1	-	—		
5.	Belve	1	1	-	1	1	-	1	-	1	1	-	1	1	1	-	5	3	2	2	1	1	1	-	1	—			—			—			1	-	1	3	1	2	1	1	-	1	-	1
6.	Vandse	1	1	-	1	1	-	1	-	1	1	1	-	1	1	-	7	4	3	4	1	3	1	-	1	1	-	—			—		1	1	-	1	1	-	3	1	2	—			—	
7.	S.Narayana	1	1	-	1	1	-	1	-	1	1	1	-	1	1	-	4	2	2	3	1	2	1	-	1	1	-	1	—		—			—		1	-	1	3	2	1	—			—	
8.	Shiroor	1	1	-	1	1	-	1	-	1	1	1	-	1	1	-	3	3	-	2	2	-	1	-	1	1	-	1	—		—		1	1	-	1	-	1	2	2	-	—			—	
9.	Maravanthe	1	1	-	1	1	-	1	-	1	1	1	-	1	1	-	7	6	1	3	1	2	1	-	1	1	-	1	—		—			—		1	1	-	2	1	1	1	1	-	—		
10.	Halady	1	1	-	1	-	1	1	-	1	1	1	-	1	1	-	6	4	2	4	2	2	1	-	1	1	-	1	—		—			—		1	-	1	1	1	-	—			—	
11.	Gangoli	1	1	-	1	1	-	1	-	1	1	1	-	1	1	-	6	6	-	5	4	1	1	-	1	1	-	1	—		—			—		1	-	1	3	3	-	—			—	
12.	Nada	2	1	1	—			—			1	-	1	1	1	-	6	4	2	2	-	2	1	-	1	1	-	—			—			—		1	-	1	3	2	1	—			—	
13.	Kumbasi	2	2	-	—			—			1	-	1	—			4	4	-	4	3	1	1	-	1	1	-	1	—		1	1	-	1	-	1	3	3	-	—			—	
14.	Kirimanjeshwar	1	1	-	—			—			—			1	1	-	5	5	-	3	2	1	1	-	1	1	-	1	—		—			1	-	1	3	2	1	—			—	
15.	Basrur	1	1	-	—			—			1	-	1	1	1	-	6	5	1	4	3	1	—			1	1	-	—			1	1	-	1	-	1	2	1	1	—			—	
16.	Kedoor	1	1	-	—			—			—			1	1	-	5	3	2	2	1	1	1	-	1	—			—		1	1	-	1	-	1	1	1	-	—			—	
17.	Aloor	1	1	-	—			—			—			—			5	3	2	—			1	-	1	1	-	1	—		—			—		1	1	-	—			—			—	
18.	Koorgi	1	-	1	—			—			—			—			1	-	1	—			1	-	1	1	-	1	—		—			1	-	1	1	-	1	—			—			—	
		24	21	3	9	8	1	10	1	9	14	10	4	15	15	-	104	76	28	51	26	25	17	1	16	15	3	12	3	3	-	4	4	-	17	4	13	45	30	15	5	5	-	4	1	3

S: Sanctioned
W: Working
V: Vacant

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಕೆಲವು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದೆ. ನಾನು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವಿಚಾರ ಹೇಳುವುದಾದರೆ, ಅಲ್ಲಿ ವೈದ್ಯಾಧಿಕಾರಿಗಳು ಮೂವರಿದ್ದು, ಒಂದು ಹುದ್ದೆ ಇನ್‌ಚಾರ್ಜ್‌ನಲ್ಲಿರುವವರು ನಡೆಸುತ್ತಿದ್ದಾರೆ. ಒಬ್ಬರು ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು ವಾರಕ್ಕೆ ಎರಡು ದಿವಸಗಳು ಮಾತ್ರ ಬರುತ್ತಾರೆ, ಮತ್ತೊಂದು ಹುದ್ದೆ ಖಾಲಿ ಇದೆ, ಅದೇ ರೀತಿ ಪ್ರಥಮ ದರ್ಜೆ ಸಹಾಯಕ ಹುದ್ದೆ ಖಾಲಿ, ಕಾಂಪೌಂಡರ್ ಹುದ್ದೆ ಖಾಲಿ, ಎ.ಎನ್.ಎಂ.ನಲ್ಲಿ ಹತ್ತು ಹುದ್ದೆಗಳಿದ್ದು ಐದು ಹುದ್ದೆಗಳು ಖಾಲಿ, ಕಿರಿಯ ಆರೋಗ್ಯ ಸಹಾಯಕರ ಐದು ಹುದ್ದೆಗಳು ಖಾಲಿ, ಲ್ಯಾಬ್‌ಟೆಕ್ನಿಷಿಯನ್ ಹುದ್ದೆ ಖಾಲಿ, ನೇತ್ರಾಲಯ ಸಹಾಯಕರ ಹುದ್ದೆ ಖಾಲಿ, ಬಿ.ಹೆಚ್.ಇ. ಖಾಲಿ, ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಹುದ್ದೆ ಖಾಲಿ, ಫುಡ್ ಇನ್ಸ್‌ಪೆಕ್ಟರ್ ಹುದ್ದೆ ಖಾಲಿ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವಿಚಾರ ಇಷ್ಟಿದೆ. ನಾನು ಸಿದ್ಧಾಪುರಕ್ಕೆ ಸಂಬಂಧಿಸಿದಂತೆ ಹೇಳಿದೆ. ಅದೇ ರೀತಿ ಬಿಡಕಲಕಟ್ಟೆ, ಕೊಲ್ಲೂರು, ಬೈಂದೂರು, ಬೆಳವೆ, ವಂಡಸೆ, ಶಂಕರನಾರಾಯಣ, ಶಿರೂರು ಮರವಂತೆ ಮತ್ತು ಹಾಲಾಡಿ, ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಯಾರು ಬರುತ್ತಾರೋ ಅವರು ಮಂತ್ರಿಗಳ ಮೇಲೆ ಪ್ರಭಾವ ಬೀರಿ ಇಲ್ಲಿಂದ ವರ್ಗಾವಣೆ ಮಾಡಿಸಿಕೊಂಡು ಹೋಗುತ್ತಾರೆ. ಈ ರೀತಿ ಹೋಗುವಾಗ ಬದಲಿ ವ್ಯವಸ್ಥೆ ಇಲ್ಲದಿರುವುದರಿಂದ ತುಂಬಾ ತೊಂದರೆಯಾಗಿದ್ದು, ನೀವು ಜಿಲ್ಲಾ ಪಂಚಾಯತಿಗೆ ಇದರ ಅಧಿಕಾರ ಕೊಟ್ಟಿದ್ದು, ವರ್ಗಾವಣೆಯಾಗುವಾಗ ಬದಲಿ ವ್ಯವಸ್ಥೆ ಇಲ್ಲದೆ ಅವರನ್ನು ಏಕೆ ಅಲ್ಲಿಂದ ರಿಲೀವ್ ಮಾಡುತ್ತೀರಿ? ಒಂದು ಆಸ್ಪತ್ರೆ ಮುಚ್ಚಿ ಮತ್ತೊಂದು ಆಸ್ಪತ್ರೆಯನ್ನು ತೆರೆಯುವ ಉದ್ದೇಶವೇನು?

ಡಾ|| ಹೆಚ್. ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಕುಂದಾಪುರದಲ್ಲಿ ಒಟ್ಟು 18 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಮಂಜೂರಾಗಿರುವ ವೈದ್ಯರ ಸಂಖ್ಯೆ 24, 21 ವೈದ್ಯರನ್ನು ತುಂಬಿದ್ದೇವೆ 3 ಹುದ್ದೆಗಳು ಖಾಲಿ ಇವೆ. ಕಳೆದ ಮೂರು ವರ್ಷಗಳಲ್ಲಿ 1,200 ಜನ ಗ್ರೂಪ್ 'ಡಿ' ನೌಕರರನ್ನು ತುಂಬಿದ್ದೇವೆ.Aptholmic 500 ಜನರನ್ನು ತುಂಬಿದ್ದೇವೆ, ಎ.ಎನ್.ಎಂ. 500 ಜನರನ್ನು ತುಂಬಿದ್ದೇವೆ, ಸ್ಟಾಫ್‌ನರ್ಸ್298 ತುಂಬಿದ್ದೇವೆ, ಲ್ಯಾಬ್ ಟೆಕ್ನಿಶಿಯನ್285, ಹೆಲ್ತ್ ವರ್ಕರ್ಸ್415, ಪ್ಯಾರಾಮೆಡಿಕಲ್ ವರ್ಕರ್ಸ್251 ಒಟ್ಟು3,043 ಮಂದಿಯನ್ನು ಕಳೆದ ಮೂರು ವರ್ಷಗಳಲ್ಲಿ ನೇಮಕ ಮಾಡಿಕೊಂಡಿದ್ದೇವೆ. 800 ಮಂದಿ ವೈದ್ಯರನ್ನು ತುಂಬಿದ್ದೇವೆ. ಆರು ತಿಂಗಳ ಅವಧಿಯಲ್ಲಿ, ಹಣಕಾಸು ಇಲಾಖೆ ಅನುಮತಿ ಕೊಟ್ಟಿದೆ, ಹೆಲ್ತ್ ವರ್ಕರ್ಸ್ 242, ಲ್ಯಾಬ್‌ಟೆಕ್ನಿಶಿಯನ್ 281, ಎಕ್ಸರೆ ಟೆಕ್ನಿಶಿಯನ್ 18, ಫಾರ್ಮಸಿಸ್ಟ್ 719, ಅಪ್ತಾಲ್‌ಮಿಕ್ ಅಸಿಸ್ಟೆಂಟ್ 28, ಎಲೆಕ್ಟ್ರಿಶಿಯನ್ 6, ಪ್ಯಾರಮೆಡಿಕಲ್ ವರ್ಕರ್ಸ್ 138, ಸ್ಟಾಫ್ ನರ್ಸ್ 1,677 ಮತ್ತು ಡ್ರೈವರ್ 480 ಜನ ಒಟ್ಟು 3,599 ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳುತ್ತೇವೆ. ಕೆಪಿಎಸ್‌ಸಿ ಯವರು 298 ಸ್ಟಾಫ್ ನರ್ಸ್‌ಗಳನ್ನು ಕಳುಹಿಸಿ ಕೊಡುತ್ತಿದ್ದಾರೆ. 2,500 ಹುದ್ದೆಗಳನ್ನು ತುಂಬಲು ಸರ್ಕಾರದಿಂದ ಸಹಾಯವನ್ನು ಕೇಳಿದ್ದೆವು. ಅದಕ್ಕೆ ಅನುಮತಿ ಸಿಕ್ಕಿದರೆ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತುಂಬುವ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ತಾವು ಉತ್ತರದಲ್ಲಿ 337 ಹುದ್ದೆಗಳು ಮಂಜೂರಾಗಿದ್ದು 187 ಹುದ್ದೆಗಳು ಖಾಲಿ ಇದೆಯೆಂದು ಹೇಳಿದ್ದೀರಿ; ಅರ್ಧಕ್ಕಿಂತಲೂ ಹೆಚ್ಚು

ಹುದ್ದೆಗಳು ಖಾಲಿ ಇವೆ. ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದಿದ್ದರೂ, ಕಾಂಪೌಂಡರ್ ಇಲ್ಲದಿದ್ದರು ದಾದಿ ಇಲ್ಲದಿದ್ದರೂ, ಸ್ವೀಪರ್ಸ್ ಇಲ್ಲದಿದ್ದರೂ ಶಾಸಕರೇ ಜವಾಬ್ದಾರರಾಗುತ್ತಾರೆ. ಇದೆಲ್ಲ ಪತ್ರಿಕೆಯಲ್ಲಿ ಬರುತ್ತದೆ. ಪತ್ರಿಕೆಯಲ್ಲಿ ಏನು ಬಂದರೂ ಸಹ ಅದಕ್ಕೆ ಸ್ಪಷ್ಟೀಕರಣ ನೀಡುವ ಜವಾಬ್ದಾರಿ ತಮ್ಮ ಇಲಾಖೆಗೆ ಇಲ್ಲ. ಶಾಸಕರು ಕೆಲಸ ಮಾಡುತ್ತಿಲ್ಲ, ನಿದ್ರೆ ಮಾಡುತ್ತಿದ್ದಾರೆ, ಇದರ ಬಗ್ಗೆ ಚಕಾರ ಎತ್ತುತ್ತಿಲ್ಲ ಎನ್ನತಕ್ಕ ಹೊಣೆ ತಾವು ಮಾಡುವ ಕೆಲಸದಿಂದ ನಮ್ಮಮೇಲೆ ಬರುತ್ತಿದೆ. ಒಂದು ಆಸ್ಪತ್ರೆಯನ್ನು ತೆರೆದು ಮತ್ತೊಂದು ಆಸ್ಪತ್ರೆಯನ್ನು ಮುಚ್ಚುವುದು ಎಷ್ಟು ಸಮಂಜಸವೆಂದು ಕೇಳುತ್ತೇನೆ.

ಅಧ್ಯಕ್ಷರು : ಹುದ್ದೆಗಳು ಖಾಲಿ ಇರುವುದು, ಸಚಿವರು ಸರ್ಕಾರದಿಂದ ಮಂಜೂರಾತಿ ಕೇಳಿರುವುದು ಅದಕ್ಕೆ ಅನುಮತಿ ಕೊಟ್ಟಿರುವುದು ಬೇರೆ ಬೇರೆ ವಿಚಾರವಾಯಿತು. ಅವರು ಪ್ರಶ್ನೆ ಕೇಳಿರತಕ್ಕದ್ದು it is very simple ಇಷ್ಟು ಹುದ್ದೆ ಇದೆ, out of sanctioned posts, they have already been sanctioned by Finance Department, but because of the unscientific transfer order that the Government passes ಇದು ಆಗುತ್ತದೆ. ಒಂದು ಕಡೆ ಭರ್ತಿ ಇರುತ್ತದೆ ಇನ್ನೊಂದು ಕಡೆ ಖಾಲಿ ಇರುತ್ತದೆ. ಇದು ಸ್ಥಳೀಯ ಶಾಸಕರ ಮೇಲೆ ಪರಿಣಾಮ ಬೀರುತ್ತದೆಂದು ಅವರ ವಾದವಾಗಿದೆ.

ಡಾ|| ಹೆಚ್. ಸಿ. ಮಹದೇವಪ್ಪ : ಮನ್ಯ ಅಧ್ಯಕ್ಷರೆ, ಈಗಾಗಲೇ ವೈದ್ಯರ ವರ್ಗಾವಣೆಗೆ ಸಂಬಂಧಿಸಿದಂತೆ ನೀತಿಯೊಂದನ್ನು ಈ ಮನೆಯ ಗಮನಕ್ಕೆ ತಂದಿದ್ದೇನೆ. ಆರೋಗ್ಯ ಇಲಾಖೆ ಜಿಲ್ಲಾಪರಿಷತ್ತಿನ ಆಡಳಿತದ ವ್ಯಾಪ್ತಿಗೆ ನೇರವಾಗಿ ಬರುವುದರಿಂದ ಅಲ್ಲಿ ಪ್ರಭಾವಿಗಳು ಸ್ಥಳೀಯ ಸಂಸ್ಥೆಯನ್ನು ಹಿಡಿದುಕೊಂಡು ಪ್ರಾಬ್ಲಮ್ಯಾಟಿಕ್‌ನಿಂದ ನಾನ್‌ಪ್ರಾಬ್ಲಮ್ಯಾಟಿಕ್‌ಗೆ ವರ್ಗ ಮಾಡತಕ್ಕ ಪ್ರಯತ್ನ ನಡೆದಾಗ ಆಯಾಯ ಜಿಲ್ಲಾಪರಿಷತ್‌ಗಳಿಗೆ ಇಂಥ ಕ್ರಮ ಕೈಗೊಳ್ಳಲು ಹೋಗಬೇಡಿ ಎಂದು ಸೂಚನೆ ಕೊಡುತ್ತೇನೆ. ಜೊತೆಗೆ ಆ ಭಾಗದಲ್ಲಿ ಟೆಕ್ನಿಶಿಯನ್ ಆಗಲಿ, ವೈದ್ಯರಾಗಲಿ ಲಭ್ಯವಾಗುವುದಿಲ್ಲ. ಸೂಕ್ಷ್ಮಮತಿಗಳು, ವಿದ್ಯಾವಂತತೆಯನ್ನು ಹೊಂದಿರತಕ್ಕ ಜಿಲ್ಲೆಗಳಲ್ಲಿ ಸಹಜವಾಗಿ ಪ್ರತಿಯೊಂದು ವಿಚಾರದ ಬಗ್ಗೆ ಪ್ರಶ್ನೆ ಮಾಡತಕ್ಕ ಸಂದರ್ಭದಲ್ಲಿ ಅಲ್ಲಿರತಕ್ಕ ಪ್ರತಿನಿಧಿಗಳು ಸಹ ಸರ್ಕಾರವನ್ನು ಒತ್ತಾಯ ಮಾಡತಕ್ಕದ್ದು, ಸಹಜವಾದ ಪ್ರಕ್ರಿಯೆಯಾಗಿದೆ. ಎಷ್ಟು ಸಾಧ್ಯವಿದೆಯೋ ಅಷ್ಟನ್ನು ಮಾಡಲು ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇನೆ. ಪರ್ಯಾಯ ವ್ಯವಸ್ಥೆಯಾಗದೆ ವರ್ಗಾವಣೆ ಮಾಡಿದಾಗ ಕಾನೂನನ್ನು ಮೀರಿ ನಾನು ಅವರಿಗೆ ಸೂಚನೆ ಕೊಡುತ್ತೇನೆ.

ಸಾರ್ವಜನಿಕ ಗ್ರಂಥಾಲಯಗಳು

544 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಗ್ರಾಂಥಾಲಯಕ್ಕೆ ಸರ್ಕಾರವು ನಿಗಧಿ ಮಾಡಿದ ಹಣವೆಷ್ಟು?

ಆ) ಕಳೆದ 2 ವರ್ಷಗಳಲ್ಲಿ ಎಷ್ಟೆಷ್ಟು ಪುಸ್ತಕಗಳನ್ನು ಖರೀದಿಸಿದೆ?